ಓ.ಎಸ್. ನಂ. 239/2018

ಪಿ.ಡಬ್ಲ್ಯುಃ 01 (ತಿಪ್ಪೇರುದ್ರಪ್ಪ)

ದಿನಾಂಕಃ 29.08.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ – ಶ್ರೀ TMS ವಕೀಲರಿಂದ.

ಪ್ರತಿವಾದಿಯ ತಮ್ಮನಾದ ಸಣ್ಣ ಬೋರಯ್ಯ ಅವರು ಅಕ್ರಮ-ಸಕ್ರಮ ಸಮಿತಿಯ ಮುಂದೆ ಅರ್ಜಿ ಸಲ್ಲಿಸಿದ್ದು ಅದು ಈಗಲೂ ಬಾಕಿ ಇದ್ದು ಹಾಗೂ ಆ ಬಗ್ಗೆ ಗೌರವಾನ್ವಿತ ಉಚ್ಚ ನ್ಯಾಯಾಲಯದಲ್ಲಿ ಡಬ್ಲ್ಯೂ ಪಿ 12790/2000 ರಂತೆ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಅದರಲ್ಲಿ ನನ್ನನ್ನು ಸಹ ಪಕ್ಷಗಾರರನ್ನಾಗಿ ಮಾಡಿದ್ದರು ಎಂದರೆ ಇಲ್ಲ, ಅದರಲ್ಲಿ ನನಗೆ ನೋಟಿಸು ಬಂದಿತ್ತು ಎಂದರೆ ಇಲ್ಲ. ಸದರಿ ಡಬ್ಲ್ಯೂ ಪಿ 12790/2000 ರಲ್ಲಿ ತಹಶೀಲ್ದಾರ್ ಅವರಿಗೆ ಅರ್ಜಿಯನ್ನು ಶೀಘ್ರವಾಗಿ ವಿಲೇ ಮಾಡಲು ನಿರ್ದೇಶನ ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಜಮೀನಿನಲ್ಲಿ ಪ್ರತಿವಾದಿ, ಆತನ ಅಣ್ಣ ದೊಡ್ಡ ಬೋರಯ್ಯ ಮತ್ತು ತಮ್ಮ ಸಣ್ಣ ಬೋರಯ್ಯ ಗುಡಿಸಲು ಹಾಕಿಕೊಂಡು ಅಲ್ಲೇ ವಾಸವಾಗಿದ್ದಾರೆ ಎಂದರೆ ಇಲ್ಲ. ಅವರು ಎಲ್ಲಿ ವಾಸವಾಗಿದ್ದಾರೆ ಎಂದರೆ ಊರಿನಲ್ಲಿ ವಾಸವಾಗಿದ್ದಾರೆ. ದಾವಾ ಜಮೀನಿನಲ್ಲಿ ಕುರಿ ಮೇಕೆಗಳಿಗೆ ಕಟ್ಟೆ ಕಟ್ಟಿಕೊಂಡಿದ್ದು, ದನದ ಕೊಟ್ಟಿಗೆಯನ್ನು ಸಹ ಕಟ್ಟಿಕೊಂಡಿದ್ದಾರೆ ಎಂದರೆ ಇಲ್ಲ.

ಈಗ ನೋಡುತ್ತಿರುವ ಭಾವಚಿತ್ರದಲ್ಲಿರುವ ಭೂಮಿ ದಾವಾ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಸ್ವಾಧೀನದಲ್ಲಿ ಸಣ್ಣ ಬೋರಯ್ಯ ಇದ್ದಾರೆ ಎಂದರೆ ಸರಿಯಲ್ಲ. ಪಟ್ಟಾ ನೀಡಲು ಆತ ತಹಶೀಲ್ದಾರ್ ಅವರಿಗೆ ಅರ್ಜಿ ಸಲ್ಲಿಸಿದ್ದು, ಅದು ಇನ್ನು ಬಾಕಿ ಇದೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ಸ್ವಾಧೀನದಲ್ಲಿದ್ದೆ ಎಂದು ಹೇಳುತ್ತಿರುವುದು ಸುಳ್ಳು ಎಂದರೆ ಸರಿಯಲ್ಲ. ದಾವಾ ಸ್ವತ್ತು 13.64 ಎಕರೆ ರಲ್ಲಿ ಎಲ್ಲಿ ಬರುತ್ತದೆ ಎಂದು ಹೇಳಲಾಗುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದನ್ನು ಅಳತೆ ಮಾಡಿಸಿದರೆ ಗೊತ್ತಾಗುತ್ತದೆ. ಪಟ್ಟಾ ನೀಡಿದಾಗ ಸರ್ವೇ ಮಾಡಿದ್ದು ಅದರ ಪ್ರತಿ ನಮಗೆ ಕೊಟ್ಟಿಲ್ಲ. ಸರ್ವೇ ವರದಿ ನನ್ನ ಹತ್ತಿರ ಇದೆಯಾ ಎಂದರೆ ವಕೀಲರಿಗೆ ನೀಡಿರುತ್ತೇನೆ. ಅದನ್ನು ನ್ಯಾಯಾಲಯಕ್ಕೆ ವಕೀಲರು ಸಲ್ಲಿಸಿರುತ್ತಾರೆ. ಇಂದಿನವರೆಗೂ ಯಾವುದೇ ಸರ್ವೇ ಆಗಿರುವುದಿಲ್ಲ ಎಂದರೆ ಹೌದು. ನಮಗೆ ನೀಡಿರುವ ಪಟ್ಟಾದಲ್ಲಿ ಚೆಕ್‌ಬಂದಿ ನಮೂದಿಸಲಾಗಿದೆ. ನಾನು ನೀಡಿದ್ದಾರೆ ಎಂದು ಹೇಳುವ ಪಟ್ಟಾದಲ್ಲಿ ಚೆಕ್‌ಬಂದಿ ಇಲ್ಲ ಎಂದರೆ ನನಗೆ ಓದಲು ಬರುವುದಿಲ್ಲ. ಅದರಲ್ಲಿ ಚೆಕ್‌ಬಂದಿ ಬರೆದಿದೆಯೋ ಇಲ್ಲವೊ ಎಂದು ನಾನು ಕೇಳಿ ತಿಳಿದುಕೊಂಡಿರುವುದಿಲ್ಲ.

ಓ.ಎಸ್. ನಂ. 239/2018

ಪಿ.ಡಬ್ಲ್ಯೂ: 01 (ತಿಪ್ಪೇರುದ್ರಪ್ಪ)

ದಾವಾ ಆಸ್ತಿಯ ಮಾಲೀಕ ನಾನಲ್ಲ, ಅದರಲ್ಲಿ ಸ್ವಾಧೀನ ಇಲ್ಲ ಎಂದರೆ ಸುಳ್ಳು. ಇಂದಿಗೂ ಪ್ರತಿವಾದಿಯ ತಮ್ಮನೇ ಅದನ್ನು ಸಾಗುವಳಿ ಮಾಡುತ್ತಿದ್ದಾನೆ ಎಂದರೆ ಸರಿಯಲ್ಲ.

2001 ರಲ್ಲಿ ಸಣ್ಣ ಬೋರಯ್ಯನ ವಿರುದ್ಧ ಇದೇ ನ್ಯಾಯಾಲಯದಲ್ಲಿ ದಾವೆ ಹೂಡಿದ್ದೆ ಎಂದರೆ ಹೌದು. ಆತ ಗಲಾಟೆ ಮಾಡಿದ ಕಾರಣ ಅದನ್ನು ಸಲ್ಲಿಸಿರುತ್ತೇನೆ, ಅದು ನಮ್ಮಂತೆ ಆಗಿರುತ್ತದೆ, ಅದನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ನಾನು ನ್ಯಾಯಾಲಯಕ್ಕೆ ಬರದೇ ಇದ್ದ ಕಾರಣ ದಿಃ 31.08.2006 ಕ್ಕೆ ಅದು ವಜಾ ಆಗಿರುತ್ತದೆ ಎಂದರೆ ಸುಳ್ಳು. ಅ.ದಾ. ಸಂಖ್ಯೆ 151/2005 ರಲ್ಲಿ ಸಣ್ಣ ಬೋರಯ್ಯ ತಕರಾರು ಸಲ್ಲಿಸಿದ್ದ ಎಂದರೆ ನನಗೆ ಗೊತ್ತಿಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,

ಕೂಡ್ಲಿಗಿ.